# ಉತ್ತರದಿಂದ ಗಲಿಲಾಯಕ್ಕೆ

## ಓದುವ ಮನೆ ಪಾಠ #5

IV. ಮೊದಲ ಪಸ್ಕದಿಂದ, ಎರಡನೆಯದು (ಮುಂದುವರೆಯುವದು).
  C. ಯುದಾಯದಿಂದ, ಗಲಿಲಾಯಕ್ಕೆ ವರ್ಗಾವಣೆ.
    1. ವರ್ಗಾವಣೆಗೆ ಕಾರಣ (ಮತ್ತಾಯ 4:12; ಮಾರ್ಕ 1:14; ಲೂಕ 3:19, 20; ಯೋಹಾನ 4:1-3).
    2. ಸಮಾರ್ಯದ ಘಟನಾವಳಿ (ಯೋಹಾನ 4:4-42).
    3. ಗಲಿಲಾಯದಲ್ಲಿ ಯೇಸು ಮಾಡಿದ ಸಾಮಾನ್ಯ ಕಾರ್ಯಗಳು (ಲೂಕ 4:14; ಯೋಹಾನ 4:43-45).
  D. ಗಲಿಲಾಯದಲ್ಲಿ ಯೇಸು ಮಾಡಿದ ಸಾಮಾನ್ಯ ಕಾರ್ಯಗಳು (ಮತ್ತಾಯ 4:17; ಮಾರ್ಕ 1:14, 15; ಲೂಕ 4:14, 15).
  E. ಕಾನದಲ್ಲಿ ಮಾಡಿದ ಎರಡನೆಯ ಮಹತ್ಕಾರ್ಯ (ಯೋಹಾನ 4:46-54).
  F. ಗಲಿಲಾಯದಿಂದ ಕಪೆನೌರ್ಮಿಗೆ ಸ್ಥಳಾಂತರ (ಮತ್ತಾಯ 4:13-16).
  G. ನಾಲ್ಕು ಜನ ಬೆಸ್ತರ ಕರೆಯುವಿಕೆ (ಮತ್ತಾಯ 4:18-22; ಮಾರ್ಕ 1:16-20; ಲೂಕ 5:1-11).

### ಪೀಠಿಕೆ

ಯೇಸುವಿನ ಯೆರೂಸಲೇಮು ಮತ್ತು ಯುದಾಯದಲ್ಲಿನ ಆರಂಭದ ಸೇವೆಯ ಮೇಲಿನ ಪಾಠವಾದ "ಮೊದಲ ಸಾರಿ ಎಲ್ಲವೂ" ಎಂಬುದರಲ್ಲಿ ಯೋಹಾನನಿಂದ ದಾಖಲಿಸಲ್ಪಟ್ಟಿದೆ. ಈ ಅಧ್ಯಯನದಲ್ಲಿ, ಇದು ಉತ್ತರದ ಗಲಿಲಾಯಕ್ಕೆ ಸ್ಥಳಾಂತರಗೊಳ್ಳುತ್ತದೆ. ಸಿನೋಪ್ಟಿಕ್[6] ಸಂಗತಿಗಳ ಕೊನೆಯ ಒಂದುವರೆ ವರ್ಷದ ಬಗೆಗೆ ಇರುವಂಥ "ಶ್ರೇಷ್ಟವಾದ ಗಲಿಲಾಯದ ಸೇವೆ" ಎಂಬುದರ ಮೇಲೆ ಬೆಳಕನ್ನು ಚಲ್ಲುವವುಗಳು ಆಗಿವೆ. ಈ ಪಾಠವು ಆ ಸೇವೆಯ ಪೂರ್ವ ಸಂಗತಿಗಳನ್ನು ತಿಳಿಸುವಂಥದ್ದು ಆಗಿದೆ.

### ಉತ್ತರದೆಡೆಗೆ ಸಾಗುವ ಸಮಯ

### (ಮತ್ತಾಯ 4:12; ಮಾರ್ಕ 1:14; ಲೂಕ 3:19, 20; ಯೋಹಾನ 4:1-4)

ಯೇಸು ಮತ್ತು ಆತನ ಶಿಷ್ಯರು ಯುದಾಯದಲ್ಲಿನ ಸ್ನಾನಿಕನಾದ ಯೋಹಾನನಿಗಿಂತ ಹೆಚ್ಚಾದ ಬೋಧನೆ ಮತ್ತು ದೀಕ್ಷಾಸ್ನಾನದ ಯಶಸ್ಸನ್ನು ಆನಂದಿಸುತ್ತಿದ್ದರು (ಯೋಹಾನ 3:22, 26; 4:1). ಯಶಸ್ಸಿನ ಉತ್ತುಂಗದಲ್ಲಿದ್ದಾಗ, ಯುದಾಯವನ್ನು ಬಿಟ್ಟು ಗಲಿಲಾಯಕ್ಕೆ ಹೋಗಲು ಇದು ಸೂಕ್ತವಾದ ಸಮಯ ಎಂದು ಯೇಸು ನಿರ್ಧರಿಸಿದನು. ಎರಡು ಸಂಗತಿಗಳು ಈ ನಿರ್ದಿಷ್ಟವಾದ ಸಮಯದಲ್ಲಿ ಚಾಲನೆಯನ್ನು ಕೊಡುಗೆಯಾಗಿ ಇಟ್ಟಿವೆ.

ಮತ್ತಾಯ ಮತ್ತು ಮಾರ್ಕರು ಈ ನಿರ್ಧಾರಕ್ಕೆ ಒಂದು ಕಾರಣವನ್ನು ಕೊಡುತ್ತಾರೆ. ಮತ್ತಾಯ 4:12 "ಯೋಹಾನನು (ಹೆರೋದನಿಂದ)[1] ಸೆರೆಗೆ ಬಿದ್ದನೆಂದು ಯೇಸು ಕೇಳಿ ಆ ಸ್ಥಳವನ್ನು ಬಿಟ್ಟು ಗಲಿಲಾಯ ಸೀಮೆಗೆ ಹೊರಟು ಹೋದನು" ಎಂದು ಹೇಳುತ್ತದೆ (ಮಾರ್ಕ 1:14 ನೋಡಿರಿ). ಉಪರಾಜನಾದ ಹೆರೋದನು ತನ್ನ ಸೋದರನ ಮಗಳೂ ಮತ್ತು ಸೋದರನಾದ ಫಿಲಿಪ್ಪನ ಹೆಂಡತಿಯಾದ ಹೆರೋದ್ಯಳೊಂದಿಗೆ[2] ವಾಸಿಸುತ್ತಿದ್ದನು. ಯಾವದಕ್ಕೂ ಅಂಜದ ಸ್ನಾನಿಕನಾದ ಯೋಹಾನನು ಹೆರೋದನಿಗೆ "ನೀನು

ಇವಳನ್ನು ಇಟ್ಟುಕೊಂಡಿರುವದು ಧರ್ಮವಲ್ಲ" ಎಂದು ಹೇಳುತ್ತಿದ್ದನು (ಮತ್ತಾಯ 14:4). ಇದು ಹೆರೋದ್ಯಳನ್ನು ಕೋಪೋದ್ರಿಕ್ತಳನ್ನಾಗಿಸಿದ್ದರಿಂದ ಅವಳು ಯೋಹಾನನ್ನು ಸೆರೆಯಲ್ಲಿ ಹಾಕಿಸಲು ಹೆರೋದನಿಗೆ ಒತ್ತಾಯಿಸಿದಳು (ಮಾರ್ಕ 6:17-19). ಆಗ ಅರಸನು "ಆತನನ್ನು ಸೆರೆಯಲ್ಲಿ ಹಾಕಿದನು" (ಲೂಕ 3:20).

ಯೋಹಾನನು ಸೆರೆಗೆ ಬಿದ್ದನಂತರ ಯೇಸು ಗಲಿಲಾಯಕ್ಕೆ ಹೋದನೆಂದು ನೀವು ಓದುವಾಗ, ಉಪರಾಜನಾದ ಹೆರೋದನು ಯೇಸುವನ್ನೂ ಕೂಡ ಸೆರೆಯಲ್ಲಿ ಹಾಕುವ ಇಚ್ಛೆಯುಳ್ಳವನಾದ್ದರಿಂದ, ಆತನು ಹೆರೋದನಿಂದ ದೂರ ಓಡಿಹೋಗಿರಬೇಕೆಂದು ನೀವು ಯೋಚಿಸುತ್ತಿರಬಹುದು. ವಾಸ್ತವವಾಗಿ ಯೇಸು ಹೆರೋದನ ಪ್ರಾಂತ್ಯದ ಅಧಿಕಾರಕ್ಕೆ ಒಳಪಟ್ಟವನಾಗಿದ್ದನು (ನೋಡಿ ಲೂಕ 23:6, 7). ಹಾಗಾದರೆ ಯೋಹಾನನನ್ನು ಸೆರೆಯಲ್ಲಿ ಹಾಕುವಿಕೆಯು ಯೇಸುವನ್ನು ಗಲಿಲಾಯಕ್ಕೆ ಹೋಗಲು ಯಾಕೆ ಪ್ರೇರೆಪಿಸಿತು? ಯಾಕೆಂದರೆ ಆ ಪ್ರದೇಶದಲ್ಲಿನ ಯೋಹಾನನ ಶಿಷ್ಯರನ್ನು ಉತ್ತೇಜಿಸಲು,[3] ಹರಡಿಹೋಗುವುದರಿಂದ ತಡೆಯುವದು, ಯೇಸು ಉತ್ತರದೆಡೆಗೆ ಬೇಗ ಹೋಗುವುದಕ್ಕೆ ಕಾರಣವಾಗಿತ್ತು ಎಂದು ಕೆಲವರು ಯೋಚಿಸುತ್ತಾರೆ.

ಯೇಸು ಯುದಾಯವನ್ನು ಬಿಡುವುದನ್ನು ಸೂಕ್ತ ಎಂದು ಯೋಚಿಸಿದ್ದಕ್ಕೆ ಯೋಹಾನನು ಇನ್ನೊಂದು ಕಾರಣವನ್ನು ಕೊಡುತ್ತಾನೆ: "ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರನ್ನು ಮಾಡಿಕೊಂಡು ಅವರಿಗೆ ದೀಕ್ಷಾಸ್ನಾನ ಮಾಡಿಸುತ್ತಾನೆಂಬ ಸುದ್ದಿಯನ್ನು ಫರಿಸಾಯರು ತಿಳಿದಾಗ ಆತನು ಯುದಾಯವನ್ನು ಬಿಟ್ಟುಹೋದನು ..." (ಯೋಹಾನ 4:1-3). ಸ್ವಲ್ಪಕಾಲದ ಮಟ್ಟಿಗೆಯಾದರೂ ಫರಿಸಾಯರಿಗೆ ಬಲವಾಗಿರುವ ಪ್ರದೇಶದಲ್ಲಿ ಯಾರೊಡನೆಯು ನೇರ ಸಂಘರ್ಷವು ಯೇಸುವಿಗೆ ಬೇಡವಾಗಿತ್ತು. ಒಂದು ವರ್ಷವನ್ನು ಯುದಾಯದಲ್ಲಿ ಕಳೆದ ಯೇಸು ಮತ್ತು ಆತನ ಶಿಷ್ಯರು "ಗಲಿಲಾಯಕ್ಕೆ ತಿರುಗಿ ಹೋದರು" (ಯೋಹಾನ 4:3).[4]

## ವಿಶ್ರಾಂತಿಯ ತಂಗುದಾಣ (ಯೋಹಾನ 4:4-42)

ಯುದಾಯದಿಂದ ಗಲಿಲಾಯಕ್ಕೆ ಇರುವ ಬಲು ನೇರವಾದ ಮಾರ್ಗ ಎಂದರೆ ಸಮಾರ್ಯ ಪ್ರಾಂತದ ಮೂಲಕವೇ ಆಗಿತ್ತು,[5] ಆದರೆ ಹೆಚ್ಚಾದ ಯೆಹೂದಿಗಳು ಸಮಾರ್ಯದವರನ್ನು ಸೇರದ ಕಾರಣ ಯುದಾಯದಿಂದ ಗಲಿಲಾಯಕ್ಕೆ ಬಳಸುಮಾರ್ಗವನ್ನು ಉಪಯೋಗಿಸುತ್ತಿದ್ದರು: ಅವರು ಪೂರ್ವದಲ್ಲಿ ಪ್ರಯಾಣಿಸಿ, ಯೋರ್ದನ್ ಹೊಳೆಯನ್ನು ದಾಟಿ ಮತ್ತು ಹಾಗೆಯೇ ಗಲಿಲಾಯವನ್ನು ತಲುಪುವ ತನಕ ಹೊಳೆಯ ಪೂರ್ವ ದಂಡೆಯನ್ನು ದಾಟಿ ಹೋಗುತ್ತಿದ್ದರು. ಹೀಗಿದ್ದಾಗ್ಯೂ ಯೇಸು ನೇರವಾಗಿ ಸಮಾರ್ಯದ ಮೂಲಕ ಉತ್ತರಕ್ಕೆ ಪ್ರಯಾಣಿಸಿದನು.

ಕ್ರಿಸ್ತನು "ಸಮಾರ್ಯಸೀಮೆಯನ್ನು *ಹಾದುಹೋಗಬೇಕಾಯಿತು*" (ಒತ್ತಿ ಹೇಳಿದ್ದು ನನ್ನದು) ಎಂದು ಯೋಹಾನನು ಬರೆಯುತ್ತಾನೆ (ಯೋಹಾನ 4:4). ಆತನು ಅವಸರದಲ್ಲಿದ್ದ ಕಾರಣದಿಂದ ಆತನು ಹಾಗೆ ಮಾಡಿದನು. ನೇರವಾದ ಮಾರ್ಗದಿಂದ ಹೋಗುವುದಾದರೆ ಆತನು ಮೂರು ದಿನಗಳನ್ನು ಆತನು ಉಳಿಸಬಹುದಿತ್ತು. ಹೇಗೋ ವಾಸ್ತವವೆನೆಂದರೆ ಆತನು ಸಮಾರ್ಯದಲ್ಲಿ ಕೆಲ ದಿನಗಳವರೆಗೆ ನಿಂತನು (ಯೋಹಾನ 4:40) ಎಂಬುದು ಇದನ್ನು ನಂಬಲಸಾಧ್ಯ ಎನ್ನಿಸುತ್ತದೆ. ಇದು ಹೆಚ್ಚಾಗಿ ಆತನು ಸಮಾರ್ಯದವರೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ನಿಟ್ಟಿನಲ್ಲಿ "ಇದ್ದನು" ಎನ್ನಬಹುದಾಗಿದೆ. ಅಡ್ಡಜಾತಿಯ ಜನಾಂಗವನ್ನು ಯೆಹೂದಿಗಳು ತೃಣೀಕರಿಸಿದರೆ, ಯೇಸು ಹೊಲವನ್ನು ನೋಡಿ "ಅವು ಬೆಳ್ಳಗಾಗಿ ಕೊಯ್ಲಿಗೆ ಬಂದಿವೆ" ಎಂದನು (ಯೋಹಾನ 4:35).

ಸಮಾರ್ಯದ ಸುಗ್ಗಿಯ ಸಮಯದಲ್ಲಿ ಯೇಸು ಒಬ್ಬ ಸ್ತ್ರೀಯನ್ನು ಭಾವಿಯ ಹತ್ತಿರ ಭೇಟಿಯಾದನು, ಮತ್ತು ಕ್ರಿಸ್ತನ ಸೇವೆಯ ಒಂದು ಬಲು ಗುರುತರವಾದ ಆಂತರಿಕ ಬದಲಾವಣೆಯು

ಅಲ್ಲಿ ಉದ್ಭವಿಸಿತು. ಆ ಸ್ತ್ರೀಯೊಂದಿಗಿನ ಯೇಸುವಿನ ಸಂಭಾಷಣೆಯನ್ನು ಆಕೆಯನ್ನು ಆತನು ಹೇಗೆ ಸಂಪರ್ಕಿಸಿದನು, ತಪ್ಪುಗಳನ್ನು ಹೇಗೆ ತಿಳಿದಿದ್ದನು, ಆತನು ಆಕೆಯನ್ನು ಹೊಸ ನಂಬಿಕೆಗೆ ಹೇಗೆ ನಡಿಸಿದನು ಆಕೆ ಪಾಪಗಳನ್ನು ಅವಳಿಗೆ ಹೇಗೆ ಮನವರಿಕೆ ಮಾಡಿಕೊಟ್ಟನು ಮತ್ತು ಅದರಲ್ಲೂ ವಿಶೇಷವಾಗಿ ಅವಳ ಹೃದಯದಲ್ಲಿ ನಂಬಿಕೆಯನ್ನು ಹೇಗೆ ಹುಟ್ಟಿಸಿದನು ಎಂಬುದು ಧಾರ್ಮಿಕವಲ್ಲದವರನ್ನು ನಂಬಿಕೆಗೆ ಹೇಗೆ ತರಬೇಕು ಎಂಬುದಕ್ಕೆ ಒಂದು ಮಾದರಿ ಅಧ್ಯಯನ ಮಾಡಲ್ಪಡುತ್ತಿದೆ.

ಈ ಸಂಪರ್ಕದ ಪರಿಣಾಮ, ಯೇಸುವಿಗೆ ಆ ಇಡೀ ಪಟ್ಟಣಕ್ಕೆ ಬೋಧಿಸುವ ಅವಕಾಶವು ದೊರೆಯಿತು. "ಹೆಚ್ಚು ಜನರ ಆತನ ವಾಕ್ಯವನ್ನು ಕೇಳಿ ನಂಬಿದರು ..." (ಯೋಹಾನ 4:41).

## ಗಲಿಲಾಯದಲ್ಲಿ ಕಾರ್ಯದ ಆರಂಭ (ಮತ್ತಾಯ 4:13-17; ಮಾರ್ಕ 1:14, 15; ಲೂಕ 4:14, 15; ಯೋಹಾನ 4:43-54)

ಸಮಾರ್ಯದವರೊಡನೆ ಕೆಲದಿನಗಳವರೆಗೆ ಇದ್ದ ನಂತರ, ಯೇಸು ಮತ್ತು ಆತನ ಶಿಷ್ಯರು ಪ್ರಯಾಣವನ್ನು ಪುನಾರಾಂಭಿಸಿ, ಉತ್ತರದ ಎಸ್ಟ್ರೊಲಿಯನ್ ಕೊಳ್ಳದ ಮೂಲಕ ಉತ್ತರದೆಡೆಗೆ ಪ್ರಯಾಣ ಬೆಳಸಿದರು. ಕೊನೆಗೆ ಅವರು ದಕ್ಷಿಣ ಗಲಿಲಯಾದ ಗುಡ್ಡವನ್ನು ತಲುಪಿದರು. ಈ ಪ್ರಾಂತದಲ್ಲಿ ಕ್ರಿಸ್ತನು ಶ್ರೇಷ್ಟಕಾರ್ಯಗಳನ್ನು ಮಾಡುವವನಾಗಿದ್ದನು.

ಆ ಸಮಯದಲ್ಲಿ ಯುದಾಯ ಮತ್ತು ಗಲಿಲಾಯಗಳು ಯೆಹೂದಿತ್ವದ ಕೇಂದ್ರ ವಾಗಿದ್ದು, ಯೇಸು ಯಾಕೆ ತನ್ನ ಶ್ರಮವನ್ನು ಗಲಿಲಾಯದಲ್ಲಿ ಕೇಂದ್ರಿಕರಿಸಿದನು? ಇಲ್ಲಿ ಮೂರು ಸಾಧ್ಯತೆಯ ಅಂಶಗಳು ಇವೆ: (1) ಯೇಸು ಬೆಳೆದದ್ದು ಗಲಿಲಾಯದಲ್ಲಿಯೇ, ಆದ್ದರಿಂದ ಆತನಿಗೆ ಅದು ಬಲು ಚಿರಪರಿಚಿತವಾದ ಪ್ರದೇಶವು ಆಗಿತ್ತು; (2) ಗಲಿಲಾಯವು ಇತರ ಎಲ್ಲಾ ಪಟ್ಟಣಗಳಿಗಿಂತ ಜನನಿಬಿಡ ಪಟ್ಟಣವಾಗಿತ್ತು; ಮತ್ತು (3) ನಿಯಮದ ಪ್ರಕಾರ, ಗಲಿಲಾಯದವರು ಯುದಾಯದವರಿಗಿಂತ ಶೀಘ್ರವಾಗಿ ತಿಳುಕೊಳ್ಳುವವರೂ ಧಾರ್ಮಿಕ ಸಂಪ್ರದಾಯಗಳ ಜೊತೆ ಕಡಿಮೆ ವ್ಯಾಮೋಹವುಳ್ಳವರೂ ಆಗಿದ್ದರು. ಯೂದನನ್ನು ಬಿಟ್ಟು ಅಪೊಸ್ತಲರಲ್ಲಿ ಎಲ್ಲರೂ ಗಲಿಲಾಯದವರೇ ಆಗಿದ್ದರು.

### ಹಾರ್ದಿಕವಾದ ಸ್ವಾಗತ

ಯೇಸುವಿನ ಸೇವೆಯ ವಾರ್ತೆಯು ಯುದಾಯದಲ್ಲಿ ಆತನಿಗಿಂತ ಮುಂಚಿತವಾಗಿ ಬಂದಿತು. "ಗಲಿಲಾಯದವರು ತಾವು ಯೆರೂಸಲೇಮಿನ ಜಾತ್ರೆಗೆ ಹೋಗಿ ಆತನು ಅಲ್ಲಿ ಮಾಡಿದ್ದನ್ನೆಲ್ಲಾ ನೋಡಿದ್ದರಿಂದ ಆತನು ಗಲಿಲಾಯಕ್ಕೆ ಬಂದಾಗ ಆತನನ್ನು ಆದರದಿಂದ ಅಂಗೀಕರಿಸಿದರು" ಎಂದು ಯೋಹಾನನು 4:45ರಲ್ಲಿ ಹೇಳುತ್ತಾನೆ (ಯೋಹಾನ 2:23ನ್ನು ಸಹ ನೋಡಿರಿ).[6]

ಯೇಸು ಯೂದಾಯದಲ್ಲಿ ಬೋಧಿಸಿದಂತೆಯೇ ಬೋಧಿಸಲು ಪ್ರಾರಂಭಿಸಿದನು. "ಯೇಸು ಗಲಿಲಾಯ ಸೀಮೆಗೆ ಬಂದು" ಕಾಲಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ[7] ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು ಎಂದು ಮಾರ್ಕನು ದಾಖಲಿಸಿದ್ದಾನೆ (ಮಾರ್ಕ 1:14ಬಿ, 15; ನೋಡಿರಿ ಮತ್ತಾಯ 4:17). "ಆತನು ಅವರ ಸಭಾಮಂದಿರಗಳಲ್ಲಿ ಬೋಧಿಸುತ್ತಾ ಬಂದನು; ಎಲ್ಲರೂ ಆತನನ್ನು ಹೊಗಳಿದರು" ಎಂದು ಲೂಕನು ಬರೆಯುತ್ತಾನೆ (4:15).[8] ಇದೊಂದು ಒಳ್ಳೆಯ ಬೆಳವಣಿಗೆಯಾಗಿತ್ತು.

**ಅದ್ಭುತ ಕಾರ್ಯಗಳು**

ಯುದಾಯದಲ್ಲಿ ಮಾಡಿದಂತೆಯೇ ಯೇಸು ಇಲ್ಲಿಯೂ ಕೂಡಾ ಅದ್ಭುತಕಾರ್ಯಗಳನ್ನು ಮಾಡಿದನು. "ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರುಗಿ ಗಲಿಲಾಯಕ್ಕೆ ಹೋದನು" ಎಂದು ಲೂಕ 4:14ಎ ಹೇಳುತ್ತದೆ. ಯೇಸು "ಪವಿತ್ರಾತ್ಮನ ಶಕ್ತಿ"ಯನ್ನು ಉಪಯೋಗಿಸಿ ಅದ್ಭುತಕಾರ್ಯಗಳನ್ನು ಮಾಡುವುದನ್ನು ಇದು ತೋರಿಸುವುದಾಗಿದೆ. ಯೇಸು ಕಾನಾ ಊರಿಗೆ ಹಿಂತಿರುಗಿದ ನಂತರದ[9] ಮೊದಲ ಅದ್ಭುತಕಾರ್ಯ ಇದಾಗಿತ್ತು.

ಯೇಸು "ತಾನು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದಂತಹ" (ಯೋಹಾನ 4:46) ಕಾನಾ ಊರಿಗೆ ಇನ್ನೊಂದು ಸಾರಿ ಭೇಟಿಯನ್ನು ಕೊಟ್ಟನು. ಬಹುಶಃ ಆ ಸ್ಥಳದವನಾಗಿರಬಹುದಾದ ನತಾನಿಯೇಲನು (ಯೋಹಾನ 21:2) ಆತನನ್ನು ತನ್ನ ಮನೆಗೆ ಆಹ್ವಾನಿಸಿರಬಹುದು. ಕಪೆರ್ನೌಮಿನ ಹತ್ತಿರ[10] "ಒಬ್ಬ ಪ್ರಧಾನನ"[11] ಮಗನು "ಸಾಯುವ ಹಾಗಿದ್ದನು" (ಯೋಹಾನ 4:46, 47). ಯೇಸು ಕಾನಾನಲ್ಲಿರುವುದನ್ನು ತಿಳಿದು, ಆತನು ತನ್ನ ಮಗನನ್ನು ಸ್ವಸ್ಥ ಮಾಡಲೆಂದು ಕೇಳುವುದಕ್ಕೋಸ್ಕರ ಆವಸರಿಸಿದನು.

ಆ ಪ್ರಧಾನನು ಯೇಸುವನ್ನು ಕಪೆರ್ನೌಮಿಗೆ ಬರಲು ಬೇಡಿಕೊಂಡನು, ಆದರೆ ಯೇಸು ಆತನಿಗೆ, "ನಿನ್ನ ಮಗನು ಬದುಕುತ್ತಾನೆ ಹೋಗು" (ಯೋಹಾನ 4:50) ಎಂದು ಹೇಳಿದನು.[12] ಆ ಮನುಷ್ಯನು ನಂಬಿದನು ಮತ್ತು ಮನೆಗೆ ಹೊರಟನು. ಆತನು ತನ್ನ ಮನೆಯನ್ನು ತಲುಪಿದಾಗ "ಆತನು ಬದುಕುತ್ತಾನೆ" ಎಂದು ಯೇಸು ಹೇಳಿದ ಸಮಯಕ್ಕೆ ಸರಿಯಾಗಿ ಆತನ ಮಗನು ವಾಸಿಯಾದನು ಎಂದು ತಿಳಿದನು (ಯೋಹಾನ 4:50-53).[13] ಇದರಿಂದ ಬಹುವಾಗಿ ಪ್ರಭಾವಿತನಾದ ಆ ಸಭ್ಯಗ್ರಹಸ್ತನು "ಅವನೂ ಅವನ ಮನೆಯವರೆಲ್ಲರೂ ಆತನನ್ನು (ಯೇಸುವನ್ನು) ನಂಬಿದರು"[14] (ಯೋಹಾನ 4:53).

ಈ ಸುದ್ಧಿ ಹಾಗೂ ಇತರ ಅದ್ಭುತಕಾರ್ಯಗಳ "ಸುದ್ಧಿಯು ಸುತ್ತಲಿರುವ ಪ್ರಾಂತ್ಯದಲ್ಲೆಲ್ಲಾ ಹಬ್ಬಿಕೊಂಡಿತು" (ಲೂಕ 4:14). ಯೇಸುವಿನ ಹೆಸರು ಎಲ್ಲರ ತುಟಿಯ ಮೇಲಿತ್ತು.

**ಕಪೆರ್ನೌಮಿಗೆ ಸ್ಥಳಾಂತರ**

ಗಲಿಲಾಯದಲ್ಲಿ ಕ್ರಿಸ್ತನ ಮೊದಲ ಕಾರ್ಯ ಗಲಿಲಾಯವನ್ನು ತನ್ನ ಕಾರ್ಯಚರಣೆಯ ಮೂಲವಾಗಿ ಸಂಸ್ಥಾಪಿಸುವುದೇ ಆಗಿತ್ತು.[15] ಮತ್ತಾಯನು ಹೀಗೆ ಬರೆಯುತ್ತಾನೆ. ಯೇಸು, "... ಗಲಿಲಾಯ ಸೀಮೆಗೆ ಹೊರಟುಹೋದನು; ಬಳಿಕ ನಜರೇತೆಂಬ ಊರನ್ನು ಬಿಟ್ಟು ಜೆಬುಲೋನ್ ನೆಫ್ಥಲೀಮ್ ಎಂಬ ನಾಡುಗಳಿಗೆ ಸಮುದ್ರದ ಹತ್ತಿರದಲ್ಲಿರುವ ಕಪೆರ್ನೌಮನೆಂಬ ಊರಿನಲ್ಲಿ ಮನೆಮಾಡಿಕೊಂಡು ಇದ್ದನು" (ಮತ್ತಾಯ 4:12ಬಿ, 13).[16] ಯೇಸು ಕಪೆರ್ನೌಮಿನಲ್ಲಿ ಎಂದಿಗೂ ಸ್ವಂತ ಮನೆಯನ್ನು ಮಾಡಿಕೊಂಡರಲಿಲ್ಲ (ಮತ್ತಾಯ 8:20), ಆದರೆ ಆತನ ಶಿಷ್ಯರಲ್ಲಿ ಕೆಲವರು ಹೊಂದಿದ್ದರು (ಮಾರ್ಕ 1:21, 29). ಈ ವಿಷಯದ ಮೇಲೆ, ಗಲಿಲಾಯದಲ್ಲಿ ಆತನ ಸೇವೆಯ ಆರಂಭದಲ್ಲಿ ಕ್ರಿಸ್ತನು ಬಲು ದಿನಗಳವರೆಗೆ ಕಪೆರ್ನೌಮನ್ನು ಬಿಟ್ಟು ಹೋಗಿರಲಿಕ್ಕಿಲ್ಲ. ಆತನು ಪ್ರಯಾಣದ ಸಮಯದಲ್ಲಿ ಆ ಪಟ್ಟಣವನ್ನು ಬಿಡುತ್ತಿದ್ದನು ಮತ್ತು ತಿರಿಗಿ ಅಲ್ಲಿಯೇ ಬರುತ್ತಿರಬಹುದು. (ಓದಿರಿ ಮಾರ್ಕ 1:21, 29, 38, 39; 2:1.)

ಕಪೆರ್ನೌಮ "ಜೆಬುಲೋನ್ ನೆಫ್ಥಲೀಮ್ ಎಂಬ ನಾಡು" ಗಳಲ್ಲಿ ಇದ್ದು (ಮತ್ತಾಯ 4:13), ಇಸ್ರಾಯೇಲರು ಕಾನಾನನ್ನು ಪ್ರವೇಶಿಸುವಾಗ ಇದು ಸಾಮಾನ್ಯವಾದ ಪರದೇಶವಾಗಿ ಎರಡು ಜನಾಂಗಗಳಲ್ಲಿ ಹಂಚಿಹೋಗಿತ್ತು (ಯೆಹೋಶುವ 19). ಯೇಸು ಚಿರಪರಿತವಾದ ಮೆಸ್ಸೀಯನ ಪ್ರವಾದನೆಯ ಒಂದು ಭಾಗವನ್ನು ಸಂಪೂರ್ಣವಾಗಿಸುವತ್ತ ಸಾಗುತ್ತಿದ್ದಾನೆ ಎಂದು ಮತ್ತಾಯನ ತನ್ನ ಓದುಗರಿಗೆ ಸೂಚಿಸುವವನಾಗಿದ್ದಾನೆ (ಮತ್ತಾಯ 4:14-16; ನೋಡಿರಿ ಯೆಶಾಯ 9:1, 2[17]).

## ಅವಶ್ಯವಿರುವ ಸಹಾಯ!
## (ಮತ್ತಾಯ 4:18-22; ಮಾರ್ಕ 1:16-20; ಲೂಕ 5:1-11)

ಉತ್ತರದ ಪ್ರಾಂತದಲ್ಲಿ ಯೇಸು ಭರದಿಂದ ಪ್ರಚಾರವನ್ನು ಆರಂಭಿಸಿದಾಗ ಹೆಚ್ಚಾಗಿ ಎಲ್ಲಾವೂ ಅದರ ಸ್ಥಾನದಲ್ಲಿಯೇ ಇದ್ದವು. ಹೆಚ್ಚಿನ ಭಾಗಗಳ ಅವಶ್ಯಕತೆಯು ಅವನಿಗಿತ್ತು; ಅದ ಶಿಷ್ಯರ ಅವಶ್ಯಕತೆಯನ್ನು ಪೂರೈಕೆ ಆಗಿತ್ತು. ಮತ್ತಾಯ 4, ಮಾರ್ಕ 1 ಮತ್ತು ಲೂಕ 5 ನಾಲ್ಕು ಬೆಸ್ತರ ಅಂದರೆ ಪೇತ್ರ, ಯಾಕೋಬ, ಯೋಹಾನ ಮತ್ತು ಅಂದ್ರೇಯರ ಕರೆಯುವಿಕೆಯ ಬಗ್ಗೆ ತಿಳಿಸುವುದಾಗಿದೆ. ಅವರು ಯೇಸುವಿನ ಯುದಾಯ ಸೇವೆಯ ಆರಂಭದಲ್ಲಿಯೇ ಆತನ ಶಿಷ್ಯರಾಗಿದ್ದರಿಂದ, ಇದು ಹೆಚ್ಚಾದವರಿಗಾಗಿ ಅಥವಾ ಈ ಎಲ್ಲಾ ಜನರಿಗೂ ಎರಡನೆಯ ಕರೆಯಾಗಿತ್ತು![18]

ನಮ್ಮ ಅಧ್ಯಯನ ಮುಂದುವರೆಯುತ್ತಿದ್ದಂತೆ, ಶಿಷ್ಯತ್ವದ ಯೇಸುವಿನ ಕರೆಯಲ್ಲಿ ಮೂರು ಹಂತಗಳು ಇರುವುದನ್ನು ನಾವು ಕಂಡುಹಿಡಿಯಬಹುದಾಗಿದೆ. ಮೊದಲ ಹಂತವು ಆತನನ್ನು ಹಿಂಬಾಲಿಸುವ ಮತ್ತು ಆತನಿಂದ ಕಲಿಯುವ ಆಹ್ವಾನ. ಆ ಬೆಸ್ತರು ಮರಳಿ ತಮ್ಮ ಹಿಂದಿನ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡ ಉದಾಹರಣೆಯಂತೆ ಕುಟುಂಬಕ್ಕೋಸ್ಕರವಾಗಿ ಮತ್ತು ಕೆಲಸಕ್ಕೋಸ್ಕರವಾಗಿ ಈ ಕರೆಯಲ್ಲಿ ಒಳಗೊಳ್ಳವದು ಅವಶ್ಯವಾಗಿಲ್ಲ. ತನ್ನ ಸೇವೆಯ ಆರಂಭದಲ್ಲಿ, ಯೇಸು ಅನೇಕ ಅರೆಕಾಲಿಕ ಕೆಲಸ ಗಳನ್ನು ಹೊಂದಿದ್ದನು. ಒಂದು ಸಾರಿ ಎಪ್ಪತ್ತು ಶಿಷ್ಯರನ್ನು ಬೋಧಿಸಲೆಂದು ಹೊರಗೆ ಕಳುಹಿಸಿದನು (ಲೂಕ 10:1-20).

ಎರಡನೆಯ ಹಂತವು ಪೂರ್ಣಸಮಯದ ಶಿಷ್ಯತ್ವವಾಗಿದೆ. ಈ ಕರೆಗೆ ಪ್ರತಿಕ್ರಿಯಿಸುವವರು ಯೇಸುವಿನೊಂದಿಗೆ ಪ್ರಯಾಣಿಸುವವರೂ ಮತ್ತು ಜೀವಿಸುವವರೂ ಆಗಿರಬೇಕು. ಈ ಶಿಷ್ಯರ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗಿರುತ್ತದೆ. ನಮ್ಮ ಈ ಪ್ರಸ್ತುತ ವೇದಭಾಗದಲ್ಲಿ ಇರುವ ನಾಲ್ಕು ಜನರ ಕರೆಯುವಿಕೆಯು ಈ ಎರಡನೆಯ ದರ್ಜೆಯಲ್ಲಿ ಬರುತ್ತದೆ.

ಮೂರನೆಯ ಹಂತವು ಯೇಸು ತನ್ನ ಶಿಷ್ಯರಲ್ಲಿ ಹನ್ನೆರಡು ಜನ ಅಪೊಸ್ತಲರನ್ನು ಆರಿಸ್ಕೊಂಡಂತದ್ದಾಗಿದೆ. ಆ ಅವಿಸ್ಮರಣೀಯ ಘಟನೆಯ ಬಗ್ಗೆ ನಂತರದಲ್ಲಿ ಅಧ್ಯಯನ ಮಾಡೋಣ. ಈಗ, ಯೇಸುವಿನ ನಿರಂತರ ಜೊತೆಗಾರರಾಗಿರುದಕ್ಕಾಗಿ ಕರೆಯಲ್ಪಟ್ಟ ಆ ನಾಲ್ಕು ಬೆಸ್ತರ ಮೇಲೆ ಕೇಂದ್ರೀಕರಿಸಬೇಕಾಗಿದೆ.

ಈ ಎಲ್ಲಾ ಮೂರು ಸಿನಾಪ್ಟಿಕ್ ಸುವಾರ್ತೆಗಳು ಈ ಕರೆಯ ಬಗ್ಗೆ ಹೇಳು ವಂತವುಗಳು ಆಗಿವೆ. ಸಾಂಗತ್ಯದಲ್ಲಿ ಜೊತೆಗೂಡಿ ಇರುವುದರಲ್ಲಿ ಒಳಗೊಂಡಿರುವ ಕ್ಲಿಷ್ಟತೆಯನ್ನು ಈ ಮೂರು ಪರಿಚ್ಛೇದಗಳು ಪ್ರಾಯೋಗಿಕವಾಗಿಸುವವುಗಳು ಆಗಿವೆ. ಮತ್ತಾಯ ಮತ್ತು ಮಾರ್ಕರು ಆ ನಾಲ್ವರ ಈ ಕರೆಯ ಬಗೆಗೆ ಹೇಳುತ್ತಾರೆ, ಲೂಕನು ಮಾತ್ರ ಮೂವರ ಕರೆಯ ಬಗೆಗೆ ಸೂಚಿಸುತ್ತಾನೆ. ಒಂದು ವೇಳೆ ನೀವು ಮತ್ತಾಯ ಮತ್ತು ಮಾರ್ಕರ ಸಂಖ್ಯೆಗಳನ್ನು ಮಾತ್ರ ಓದುವುದಾದರೆ ಯಾರ್ಯಾರು ಅಲ್ಲಿದ್ದಾರೆ ಎಂದು ನಿಮಗೆ ತಿಳಿಯದು. ಯೇಸು ಜನಸಮೂಹಕ್ಕೆ ಬೋಧಿಸುತ್ತಿದ್ದುದನ್ನು ಮತ್ತು ದೊಡ್ಡ ಸಂಖ್ಯೆಯ ಮೀನುಗಳು ಬಲೆಯಲ್ಲಿ ಸಿಕ್ಕುವ ಅದ್ಭುತ ಕಾರ್ಯವನ್ನು ಮಾತ್ರ ಲೂಕನು ದಾಖಲಿಸಿದ್ದಾನೆ.

ಈ ಭಿನ್ನತೆಗಳ ಕಾರಣದಿಂದ ಕೆಲವರು, ಲೂಕನು ಮಾರ್ಕ ಮತ್ತು ಮತ್ತಾಯರು ಹೇಳಿದ ಪ್ರಸಂಗಕ್ಕಿಂತ ಭಿನ್ನವಾದ ಸಂದರ್ಭವನ್ನು ಹೇಳಿದ್ದಾನೆ ಎಂದು ಪರಿಗಣಿಸುವವರಾಗಿದ್ದಾರೆ. ಈ ಒಂದೇ ತರದ ಘಟನೆಯು ಹಲವಾರು ವಿವರಣೆಗಳನ್ನು ಸೂಚಿಸುವುದಾಗಿದೆ. ಎಲ್ಲಾ ಮೂರು ಸಂಗತಿಗಳು: (1) ಒಂದೇ ಸ್ಥಳವನ್ನು ಸೂಚಿಸುತ್ತವೆ - ಗಲಿಲಾಯ ಸಮುದ್ರ[19] (ಮತ್ತಾಯ 4:18; ಮಾರ್ಕ 1:16; ಲೂಕ 5:1); (2) ಒಂದೇ ತರದ ಮೂವರು ವ್ಯಕ್ತಿಗಳು - ಪೇತ್ರ, ಯೋಹಾನ ಮತ್ತು ಯಾಕೋಬ (ಮತ್ತಾಯ 4:18, 21; ಮಾರ್ಕ 1:16, 19; ಲೂಕ 5:3, 10);[20] (3) ಒಂದೇ ತರದ ಕೆಲಸ - ಬಲೆಯನ್ನು ಸ್ವಚ್ಛಗೊಳಿಸುತ್ತಿದ್ದರು / ಸರಿಪಡಿಸುತ್ತಿದ್ದರು (ಮತ್ತಾಯ 4:21; ಮಾರ್ಕ 1:19; ಲೂಕ 5:2); (4) ಒಂದೇ ತರದ ಕರೆ - ಬೆಸ್ತರಾಗಿರುವುದಕ್ಕಾಗಿ

(ಮತ್ತಾಯ 4:19; ಮಾರ್ಕ 1:17; ಲೂಕ 5:10); ಮತ್ತು (5) ಒಂದೇ ತರದ ಪ್ರತಿಕ್ರಿಯೆ - ಬಲೆಯನ್ನು ಬಿಟ್ಟರು ಮತ್ತು ಆತನನ್ನು ಹಿಂಬಾಲಿಸಿದರು (ಮತ್ತಾಯ 4:20, 22; ಮಾರ್ಕ 1:18, 20; ಲೂಕ 5:11).

ಇವುಗಳು ಒಂದೇ ಸಂದರ್ಭವನ್ನು ಸೂಚಿಸುವವುಗಳು ಆಗಿದ್ದರೆ ಆ ಲೆಕ್ಕವನ್ನು ಹೇಗೆ ಸರಿಹೊಂದಿಸಬಹುದು? ಮುಂದಿನ ಸನ್ನಿವೇಶವನ್ನು ಅನುಸರಿಸಿ ಪರಿಗಣಿಸಿರಿ.[21]

ಯೇಸು ಮತ್ತು ಆತನ ಶಿಷ್ಯರು ಗಲಿಲಾಯಕ್ಕೆ ಮರಳುತ್ತಿರುವಾಗ, ಪೇತ್ರ, ಯಾಕೋಬ, ಯೋಹಾನ ಮತ್ತು ಆಂದ್ರೆಯರೆಂಬ ನಾಲ್ಕು ಜನ ಶಿಷ್ಯರು ತಮ್ಮ ಉದ್ಯೋಗವಾದ ಗಲಿಲಾಯ ಸಮುದ್ರದಲ್ಲಿ ಮೀನು ಹಿಡಿಯುವ ಕೆಲಸಕ್ಕೆ ಮರಳಿದರು. ಒಂದು ಮುಂಜಾನೆ ಇನ್ನೂನಸುಕಿರುವಾಗ ಜನರು ಸಾಮಾನ್ಯವಾಗಿ ಮೀನುಗಳನ್ನು ಹಿಡಿಯುತ್ತಿರುತ್ತಿದ್ದ ಸಮುದ್ರದ ದಂಡೆಯ ಮೇಲೆ ಯೇಸು ನಡೆದಾಡುತ್ತಿದ್ದನು. ರಾತ್ರಿಯೆಲ್ಲಾ ಫಲಸಿಗದ್ದರಿಂದ ಯಾಕೋಬ ಮತ್ತು ಯೋಹಾನರು ಈಗಾಗಲೇ ಆ ಕೆಲಸವನ್ನು ಬಿಟ್ಟು ಬಿಟ್ಟಿದ್ದರು ಮತ್ತು ದಂಡೆಯ ಮೇಲೆ ಬಲೆಗಳನ್ನು ತೊಳೆಯುವ ಮತ್ತು ಸರಿಪಡಿಸುವ ಕಾರ್ಯವನ್ನು ಮಾಡುತ್ತಿದ್ದರು. ಇತರರಿಗಿಂತ ಹೆಚ್ಚು ಚಿಂತಾಕ್ರಾಂತನಾದ ಪೇತ್ರನು ಇನ್ನೂ ಪ್ರಯತ್ನಿಸುತ್ತಲೇ ಇದ್ದನು; ಅಂತಿಮವಾಗಿ, ಆತನೂ ಸಹ ಸೋಲನ್ನೂ ಒಪ್ಪಿಕೊಂಡನು. ಆತನು ಮತ್ತು ಆಂದ್ರೆಯನೂ ದಂಡೆಗೆ ಮರಳಿದರು.

ಆ ಸಮಯದಲ್ಲಿಯೇ, ಯೇಸು ಅಲ್ಲಿದ್ದಾನೆ ಎಂಬ ಸುದ್ದಿಯು ಹಬ್ಬಿತು. ಜನಸಮೂಹ ಕೂಡಿತು, ಯೇಸು ಅವರಿಗೆ ಬೋಧಿಸಲು ಆರಂಭಿಸಿದನು. ಜನರು ಆತನ ಮೇಲೆ ಬೀಳಲು ಆತನು ಸರೋವರದೊಳಕ್ಕೆ ದೂರದಲ್ಲಿನ ಪೇತ್ರನ ದೋಣಿಯನ್ನು ಏರಿದನು ಸ್ವಲ್ಪ ಮುಂದೆ ತಳ್ಳಿದನು. ಆತನು ಹೊಸದಾಗಿ ನಿರ್ಮಿಸಿಕೊಂಡ ಪ್ರಸಂಗ ಪೀಠದಿಂದ ತನ್ನ ಪ್ರಸಂಗವನ್ನು ಮುಗಿಸಿದನು.

ಈ ಗುರುತರವಾದ ಮೀನು ಹಿಡಿಯುವಿಕೆಯು ಮೀನುಗಾರರಿಗೆ ಆಶ್ಚರ್ಯವನ್ನು ತರುವಲ್ಲಿ ಮತ್ತು ಪೇತ್ರನನ್ನು ಮೊಣಕಾಲ ಮೇಲೆ ಬೀಳುವಂತಹ ಅಸಮಾನ್ಯವಾದ, ಅದ್ಭುತವಾದ, ಅದ್ಭುತಕಾರ್ಯಕ್ಕೆ ನೆಲೆಸಿತು.[22] ಹೀಗೆ ಯೇಸು ಬೆಸ್ತರನ್ನು ತನ್ನ ಕರೆಗೆ ಪ್ರತಿಕ್ರಯಿಸುವಂತೆ ಸಿದ್ಧಪಡಿಸಿದನು. ಮತ್ತಾಯನು ಈ ಕರೆಯ ಪ್ರತಿಕ್ರಿಯೆಯನ್ನು ದಾಖಲಿಸಿದ್ದಾನೆ: "ನನ್ನ ಹಿಂದೆಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು[23] ಎಂದು ಹೇಳುತ್ತಲೇ ಅವರ ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು" (ಮತ್ತಾಯ 4:19, 20; ನೋಡಿರಿ 4:21, 22; ಮಾರ್ಕ 1:17-20). ಯೇಸುವಿನ ಕರೆಯ ಮತ್ತು ಈ ಪದಗಳ ಪ್ರತಿಕ್ರಿಯೆಯನ್ನು ವರ್ಣಿಸುವ ವ್ಯಾಖ್ಯಾನವು ಲೂಕನ ಹೇಳಿಕೆಯೂ ಮೂಲತಹವಾಗಿ ಅದೇ ತರದ್ದಾಗಿದೆ: "... ಇಂದಿನಿಂದ ಮನುಷ್ಯರನ್ನು ಹಿಡಿಯುವವರಾಗಿರುವಿರಿ ಎಂದು ಹೇಳಿದನು. ಅವರು ತಮ್ಮ ದೋಣಿಗಳನ್ನು ದಡಕ್ಕೆತಂದು ಎಲ್ಲವನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದರು" (ಲೂಕ 5:10, 11).

ಈ ರೀತಿಯಲ್ಲಿ, ಯೇಸು ಪ್ರಥಮ ವ್ಯಕ್ತಿಗಳನ್ನು ಖಾಯಂ ಆದ ಮತ್ತು ನಿರಂತರವಾಗಿ ಶಿಷ್ಯರಾಗಿರುವುದಕ್ಕಾಗಿ ಕರೆದನು. ಈ ಘಟನೆಯು ಅತಿ ಪ್ರಭಾವವುಳ್ಳ ಪರಿಣಾಮಗಳನ್ನು ಹೊಂದಿದೆ. ಈಗ ಕೆಲವರು ಯೇಸುವಿಗೆ ಮಾತ್ರ ಹಗಲು ರಾತ್ರಿ ಜೊತೆಗಾರರಗಿರುವುದಕ್ಕೆ ಅವಶ್ಯಕತೆಯು ಇದೆ ಎಂದಲ್ಲ, ಈ ಮೂವರು ಆಯಲ್ಪಟ್ಟ ಹನ್ನೆರಡು ಜನ ಅಪೊಸ್ತಲರ ಗುಂಪಿನ ಮೂರನೆಯ ಒಂದು ಭಾಗವಾಗಿದ್ದಾರೆ. ಮುಂದೆ ಈ ನಾಲ್ಕರಲ್ಲಿ ಮೂವರು ಜನರು ಯೇಸುವಿನ "ನಿಕವರ್ತಿ ಗುಂಪಿಗೆ" ಸೇರುವವರಾಗಿದ್ದಾರೆ (ಮಾರ್ಕ 5:37; 9:2; 14:33).

## ಮುಕ್ತಾಯ

ಯೇಸುವಿನ ಗಲಿಲಾಯದ ಸೇವೆಗೆ ಪ್ರತಿಯೊಂದು ಸಿದ್ಧವಾಗಿತ್ತು; ಮುಂದಿನ ಪಾಠದಲ್ಲಿ

ಈ ಪ್ರಾಂತದಲ್ಲಿ ಯೇಸು ಹೇಗೆ ತನ್ನ ಬೋಧನೆಯನ್ನು ಮತ್ತು ಸ್ವಸ್ಥತೆಯ ಪ್ರಯಾಣವನ್ನು ಹೇಗೆ ಪ್ರಯಾಣಿಸಿದನು ಎಂದು ನಾವು ನೋಡುತ್ತೇವೆ. ಕುತಾಹಲಮಯವಾದ ದಿನಗಳು ಮುಂದಿವೆ!

---

ಟಿಪ್ಪಣಿಗಳು

[1]ನೋಡಿರಿ ಮತ್ತಾಯ 14:1-12; ಮಾರ್ಕ 6:14-29. [2]ಈ ಪುಸ್ತಕದಲ್ಲಿ ಸಿಕ್ಕುವ "ಕೆಲ ಹೆರೋದರು" ಎಂಬ ಪುಸ್ತಕದ ಚಾರ್ಟನ್ನು ನೋಡಿರಿ. [3]ಐನೋನು (ಯೋಹಾನ 3:23) ಉತ್ತರ ಯುದಾಯದಲ್ಲಿದೆ ಎಂದು ಅನೇಕರು ಯೋಚಿ ಸುವವರಾಗಿದ್ದಾರೆ. ಇದು ಸಮಾರ್ಯದಲ್ಲಿ ಇರಬಹುದಾಗಿದೆ (ಈ ಪುಸ್ತಕದಲ್ಲಿ ಇರಿಸಲಾದ "ಯೇಸು ವಿನ ಪ್ರಯಾಣಗಳು" ಎಂಬ ನಕಾಶೆಯನ್ನು ನೋಡಿರಿ). [4]ಯೋಹಾನ 4:8ರಲ್ಲಿ ಯೇಸುವಿನ ಶಿಷ್ಯರು ಆತನೊಂದಿಗೆ ಪ್ರಯಾಣಿಸಿದರು ಎಂದು ನಮಗೆ ತಿಳಿಸುತ್ತದೆ. [5]ಈ ಪುಸ್ತಕದಲ್ಲಿ ಇರಿಸಲಾದ "ಯೇಸುವಿನ ಪ್ರಯಾಣಗಳು" ಎಂಬ ನಕಾಶೆಯನ್ನು ನೋಡಿರಿ. [6]ಯೋಹಾನ 4:44ರಲ್ಲಿ "ಪ್ರವಾದಿಗೆ ಸ್ವದೇಶದಲ್ಲಿ ಮರ್ಯಾದೆಯಿಲ್ಲವೆಂದು ಯೇಸು ತಾನೇ ಹೇಳಿದನು" ಎಂಬ ವಿಚಿತ್ರವಾದ ಹೇಳಿಕೆಯನ್ನು ಯೋಹಾನನು ಸೂಚಿಸುತ್ತಾನೆ. ಯೇಸು ಯಾಕೆ ಯುದಾಯವನ್ನು ಬಿಟ್ಟನು ಎಂಬ ವಿವರಣೆಗೆ ಇದೂ ಕೂಡಾ ಭಾಗವಾಗಿರಬಹುದು - ಆದರೆ ಎಲ್ಲಿ ಸುವಾ ರ್ತೆಯು ಸಾರಲ್ಪಡುತ್ತದೊ ಅಲ್ಲೆಲ್ಲಾ ಗಲಿಲಾಯವು ಯೇಸುವಿನ "ಸ್ವಂತ ಊರು" ಎಂದೇ ಪ್ರಸ್ತುತವಾಗಿದೆ. ಗಲಿಲಾಯದಲ್ಲಿ ತನಗಾದ ಆದರದ ಸ್ವಾಗತವು ಕೊನೆಯಾಗಲಾರದೆಂದು ಯೇಸುವು ತಿಳಿದಿದ್ದನು ಎಂಬ ಯೋಚನೆಯನ್ನು ಸೂಚಿಸುವ ಇನ್ನೊಂದು ಸೂಚನೆಯು ಇದಾಗಿರಬಹುದಾಗಿದೆ (ನೋಡಿರಿ ಮತ್ತಾಯ 13:57; ಮಾರ್ಕ 6:4; ಲೂಕ 4:24). [7]"ಪಶ್ಚಾತ್ತಪ ಪಟ್ಟು ಮತ್ತು ನಂಬಿರಿ" ಎಂಬ ಕ್ರಮವು ಒಂದು ರೀತಿಯಲ್ಲಿ ರೂಢೀಯಲ್ಲದಿದ್ದಾಗಿ, ಸಾಮಾನ್ಯವಾಗಿ, ಜನರು ಮೊದಲು ಯೇಸುವನ್ನು ನಂಬುವುದಕ್ಕಾಗಿ ಬರುತ್ತಾರೆ, ಅದು ಅವರ ಪಾಪಗಳಿಗೆ ಅವರು ಪಡುವ ಪಶ್ಚಾತ್ತಪದ ಕಾರಣವಾಗಿದೆ. ಯೇಸು ಬೋಧಿಸುತ್ತಿದ್ದಂತಹ ಯೆಹೂದ್ಯರು ಈಗಾಗಲೇ ದೇವರ ಮೇಲೆ ನಂಬಿಕೆಯಿಟ್ಟವರೂ ಮತ್ತು ದೇವವಾಕ್ಯದ ಜ್ಞಾನವುಳ್ಳವರೂ ಆಗಿದ್ದರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ದೇವರ ಆಜ್ಞೆಗಳನ್ನು ಕೈ ಕೊಳ್ಳುವಲ್ಲಿ ವಿಫಲರಾದದ್ದಕ್ಕಾಗಿ ಪಶ್ಚಾತ್ತಾಪಪಡುವದು ಅವರಿಗೆ ಮೊದಲು ಅವಶ್ಯವಿರುವದಾಗಿತ್ತು. ನಂತರ ಮೆಸ್ಸೀಯನ (ಕ್ರಿಸ್ತನ) ಬಗ್ಗೆ ತಿಳುಕೊಳ್ಳುವ ಮತ್ತು ಆತನನ್ನು ನಂಬುವುದಕ್ಕಾಗಿ ಬರುವದು ಅವರಿಗೆ ಅವಶ್ಯವಾಗಿತ್ತು. [8]ನಿಯಮದ ಪ್ರಕಾರ ಸಭಾಮಂದಿರದಲ್ಲಿ ಸಬ್ಬತ್ತಿನಲ್ಲಿ ಎರಡು ಬಾರಿ, ಸೋಮವಾರ ಒಂದು ಸಾರಿ, ಮತ್ತು ಗುರುವಾರ ಒಂದು ಸಾರಿ ಸಾಮಾನ್ಯ ಕೂಟಗಳು ನಡೆಯುತ್ತಿದ್ದವು. ಅನೇಕ ಪಟ್ಟಣಗಳಲ್ಲಿ ಸೋಮವಾರ ಮತ್ತು ಗುರುವಾರ "ಸಂತೆ ದಿನ"ಗಳು ಆಗಿದ್ದು ದೊಡ್ಡ ಜನಸಮೂಹವು ಅಲ್ಲಿ ಕೂಡುತ್ತಿತ್ತು. ಸಭಾಮಂದಿರಗಳು ಇನ್ನಿತರ ಕೂಟಗಳಿಗಾಗಿ ಉಳಿದ ಸಮಯದಲ್ಲಿ ತೆರೆದಿರುತ್ತಿದ್ದವು. ಈ ಸಂಗತಿಗಳು ಯೇಸುವಿಗೆ ಬೋಧಿಸಲು ಉತ್ತಮವಾದ ಅವಕಾಶವನ್ನು ಒದಗಿಸಿಕೊಟ್ಟವು. [9]ಎರಡನೆಯ "ಸೂಚಕಕಾರ್ಯ" (ಯೋಹಾನ 4:54) ಎಂಬ ಪದವು ಗಲಿಲಾಯದಲ್ಲಿ ನಡೆಸಲ್ಪಟ್ಟ ಎರಡನೆಯ ಅದ್ಭುತಕಾರ್ಯವನ್ನು, ಸ್ಪಷ್ಟವಾಗಿ ಸೂಚಿಸುವುದಾಗಿದೆ; ಮೊದಲನೆಯದು ನೀರು ದ್ರಾಕ್ಷಾರಸವಾಗಿ ಮಾರ್ಪಟ್ಟಿದ್ದು (2:11), ಮತ್ತು ಇದು ಎರಡನೆಯದು. ಯೇಸು ಇತರ ಸೂಚಕಕಾರ್ಯ/ಅದ್ಭುತಕಾರ್ಯವನ್ನು ಯುದಾಯದಲ್ಲಿರುವಾಗ ಮಾಡಿದನು (2:23; 3:2). [10]ಕಪೆರ್ನೌಮ ಉತ್ತರದಲ್ಲಿ ಇದ್ದು, ಕಾನಾನದ ಪೂರ್ವ ದಿಕ್ಕಿಗೆ ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚು ದೂರ ಮೈಲಿ ಇತ್ತು. ಈ ಪುಸ್ತಕದಲ್ಲಿ ಇರಿಸಲಾದ "ಯೇಸುವಿನ ಪ್ರಯಾಣಗಳು" ಎಂಬ ನಕಾಶೆಯನ್ನು ನೋಡಿರಿ.

[11]ಮೂಲ ವಾಕ್ಯದ ಭಾಗವು ಅಕ್ಷರ ಸಹ "ಅರಸನ ಮನುಷ್ಯ" ಎಂದಿದೆ. ಈ ಮನುಷ್ಯನು ಹೆರೋದನ ಆಸ್ಥಾನದ ಅಧಿಕಾರಿಯು ಆಗಿರಬಹುದು. [12]ನಿಜವಾಗಿ ಹೇಳುವುದಾದರೆ ಪ್ರಧಾನನ (ಯೋಹನ 4:48) ಬಗೆಗೆ ಯೇಸುವಿನ ಮೂಲ ಪ್ರತಿಕ್ರಿಯೆಯು ವಿಚಿತ್ರವಾಗಿತ್ತು. ಇದೊಂದು ವೈಯಕ್ತಿಕ ತೆಗೆಳುವಿಕೆಯಲ್ಲ ಆದರೆ ಸಾಮಾನ್ಯವಾಗಿ ಇದು ಜನಸಮೂಹದ ಎದುರಿಗೆ ಮನುಕುಲದ ಪ್ರತಿನಿಧಿಗಳ ಮುಂದಾದ ಅವಮಾನಕರವಾಗಿತ್ತು ("ನೀನು" ಎಂಬ ಪದವು ಗ್ರೀಕ್‌ನಲ್ಲಿ ಬಹು ವಚನವಾಗುತ್ತದೆ). ಬಹುಶ ಯಾವುದೇ ಅದ್ಭುತಕಾರ್ಯಗಳ ಅವಶ್ಯಕತೆಯಿಲ್ಲದೇ "ತನ್ನ ಮಾತುಗಳಿಂದಾಗಿ" (ವಚನ 41) ನಂಬಿದ ಸಮಾರ್ಯದವರ ಜೊತೆ ಗಲಿಲಾಯದವರನ್ನು ಯೇಸು ವೈದ್ರುಶ್ಯವಾಗಿರುಸುತ್ತಿದ್ದಾನೆ. ಮಾತುಗಳು ಮಾನವನ ನಂಬಿಕೆಯ ಪರೀಕ್ಷಿಸುವವುಗಳು ಎಂದು ಸೂಚಿಸುವದು ಆಗಿರಬಹುದು.

ಯಾವುದೇ ರೀತಿಯಲ್ಲಿ, ಆ ಮಾತುಗಳು ಯೇಸುವನ್ನು ನಂಬಿದ ಆ ಪ್ರಧಾನನನ್ನು ಹಿಮ್ಮೆಟ್ಟಿಸಲಿಲ್ಲ. [13]ಮತ್ತಾಯ 8:5-13 ಮತ್ತು ಲೂಕ 7:1-10ರಲ್ಲಿನ ಶತಾಧಿಪತಿಯ ಆಳಿನ ಸ್ವಸ್ಥತೆ; ಮತ್ತಾಯ 15:22-28 ಮತ್ತು 7:25-30ರಲ್ಲಿನ ಸುರೋಫೊಯನಿಕ್‌ದವಳೊಬ್ಬಳ ಮಗಳ ಸ್ವಸ್ಥತೆ; ಲೂಕ 17:11-27ರಲ್ಲಿನ ಹತ್ತು ಮಂದಿ ಕುಷ್ಠರೋಗಿಗಳ ಸ್ವಸ್ಥತೆ ಇವುಗಳನ್ನು ಒಳಗೊಂಡ ಇದು ಯೇಸು ಮಾಡಿದ ನಾಲ್ಕು ಅದ್ಭುತಗಳಲ್ಲಿ ಒಂದಾಗಿದೆ. [14]ಒಬ್ಬ ಮನುಷ್ಯನು ತನ್ನ ಮನೆಯವರೊಡನೆ ತನ್ನ ನಂಬಿಕೆಯನ್ನು ಹಂಚಿಕೊಳ್ಳುವ ಶ್ಲಾಘ್ಯವಾದ ಉದಾಹರಣೆಯಾಗಿದೆ. [15]ಯೇಸು ಈ ಹಿಂದೆ ಕಪೆರ್ನೌಮಿಗೆ ಭೇಟಿಯಾಗಿದ್ದನು (ನೋಡಿರಿ ಯೋಹಾನ 2:12). [16]ಯೇಸು ಯಾಕೆ ನಜರೇತಿನಿಂದ ಕಪೆರ್ನೌಮಿಗೆ ಯಾಕೆ ಸ್ಥಳಾಂತರಗೊಂಡನು ಎಂಬುದರ ಹೆಚ್ಚಿನ ಸಾಂಗತ್ಯಗಳು ಲೂಕ 4:16-30ರಲ್ಲಿನ ಈ ವಿಷಯದಲ್ಲಿ ಸೇರಿಸಲಾಗಿವೆ. ಎರಡು ಕಾರಣಕ್ಕೋಸ್ಕರ ನಾನು ಇದನ್ನು ಇಲ್ಲಿ ಸೇರಿಸುತ್ತಿಲ್ಲ. (1) "ಕಪೆರ್ನೌಮಿನಲ್ಲಿ ನಡೆದ" ಸಂಗತಿ ಏನು ಎಂದು ಈ ಪರಿಚ್ಛೇದವು ಸೂಚಿಸುತ್ತದೆ (ಲೂಕ 4:23), ಆದರೆ ಈ ಸಂಗತಿಯು ನಮ್ಮ ಸಾಂಗತ್ಯವಾಗಿದೆ, ಕಪೆರ್ನೌಮಿನಲ್ಲಿ ಯಾವುದು ಸಂಭವಿಸಲಿಲ್ಲ. (2) ತಿರಸ್ಕಾರದ ವಿಪರೀತವಾದ ಭಾವವು ಯೇಸುವಿನ ಗಲಿಲಾಯದ ಸೇವೆಯಲ್ಲಿ ಹೊಂದಿಕೊಂಡಿರುವಂತೆ ಕಾಣುವದು ಕಂಡುಬರುತ್ತದೆ. ಹೇಗೋ ನೀನು ಈ ಕಥೆಯಲ್ಲಿ ಈ ಸಂಗತಿಯನ್ನು ಸೇರಿಸಬಹುದು. [17]ನಿಮಗೆ ಚಿರಪರಿಚಿತವಾಗಿರುವ 6 ಮತ್ತು 7ನೇಯ ವಚನದಲ್ಲಿನ ಈ ಪ್ರವಾದನೆಯನ್ನು ಓದಿರಿ. [18]ಯೋಹಾನ 1:40, 41 ಪೇತ್ರ ಮತ್ತು ಅಂದ್ರೇಯರನ್ನು ನಿರ್ದಿಷ್ಟವಾಗಿ ಸೂಚಿಸಿದೆ. ಈ ಮೊದಲು ನಾವು ಗಮನಿಸಿದ ಹೆಸರಿಲ್ಲದ ಶಿಷ್ಯನು (ಯೋಹಾನ 1:37, 40) ಬಹುಶ ಯೋಹಾನನು ಆಗಿರಬೇಕು. ಪೇತ್ರನು ತನ್ನ ಸಹೋದರನಾದ ಅಂದ್ರೇಯನನ್ನು ಕಂಡುಕೊಂಡ ಹಾಗೆಯೇ ಯೋಹಾನನೂ ಕೂಡಾ ತನ್ನ ಸಹೋದರನಾದ ಯಾಕೋಬನನ್ನು ಕಂಡುಕೊಂಡನು ಎಂದು ವೇದ ಭಾಗದ ವಾಕ್ಯವು ಸೂಚಿಸಿರಬಹುದಾಗಿದೆ ಎಂದು ನಾವು ಸಹ ಗಮನಿಸಬಹುದು. [19]ಲೂಕನು "ಗೆನಜರೇತ ಕೆರೆ" ಎಂದಿದ್ದಾನೆ (5:1), ಆದರೆ ಇದು ಕೇವಲ ಗಲಿಲಾಯ ಸಮುದ್ರದ ಇನ್ನೊಂದು ಹೆಸರಾಗಿದೆ. ಈ ಪುಸ್ತಕದಲ್ಲಿನ "ಗಲಿಲಾಯ ಸಮುದ್ರ" ಎಂಬ ಉಪ ವಿಭಾಗವನ್ನು ನೋಡಿರಿ. [20]ಮತ್ತಾಯ ಮತ್ತು ಮಾರ್ಕರು ಕೂಡಾ ನಾಲ್ಕನೆಯ ವ್ಯಕ್ತಿಯಾದ ಅಂದ್ರೆಯನ ಬಗ್ಗೆ ಹೇಳಿದ್ದಾರೆ. ಲೂಕನು ಅಂದ್ರೆಯನನ್ನು ನಿಖರವಾಗಿ ಸೂಚಿಸಲ್ಲ, ಆದರೆ ಯಾಕೋಬನೂ ಅಥವಾ ಯೋಹಾನನೂ ಅಲ್ಲದ ಮತ್ತೇ ಕೆಲವರು ಪೇತ್ರನೊಡನೆ ದೋಣಿಯಲ್ಲಿ ಇದ್ದರು (ಲೂಕ 5:6, 7, 10). ಅಂದ್ರೆಯನು ಆತನ ಸಹೋದರನಾಗಿದ್ದು, ಆತನೊಡನೆ ಬೆಸ್ತರ ಕೆಲಸವನ್ನು ಮಾಡುತ್ತಿದ್ದನು (ಮತ್ತಾಯ 4:18).

[21]ವಿಷಯ ದಾಖಲೆಗಳು ವ್ಯತ್ಯಾಸವಾಗಿರುವಾಗ ವ್ಯತ್ಯಾಸಗಳನ್ನು ಸರಿದೂಗಿಸಬಹುದು ಎಂಬುದು ತಕ್ಕಷ್ಟು ಗೊತ್ತಿರುವಂತದ್ದೂ - ನಮಗೆ ನಿಖರವಾಗಿ ತಿಳಿಯದದ್ದೂ ಕೂಡಾ ಆಗಿರುತ್ತದೆ. [22]ಈ ಘಟನೆಯ ವಿವರಗಳ ಮೂಸೆಯ ಚರ್ಚೆಯ ವಿವರಗಳನ್ನು "ಶಿಷ್ಯತ್ವದ ಕರೆ" ಎಂಬುದರಲ್ಲಿ ನೋಡಿರಿ. [23]Will Ed Warren ತನ್ನ ಉಪನ್ಯಾಸದ ಟಿಪ್ಪಣೆಯಲ್ಲಿ, "ಒಬ್ಬನು ಸ್ವ ಎಂಜನಿಯರನನ್ನಾಗಿ ಮಾಡಬಹುದು ಆದರೆ ಸ್ವ ಕ್ರೈಸ್ತನನ್ನಲ್ಲ" ಎಂದು ಹೇಳುವ ಮೂಲಕ "ನಾನು ನಿಮ್ಮನ್ನು ಮಾಡುತ್ತೇನೆ" ಎಂಬುದಕ್ಕೆ ವಿಶೇಷವಾದ ಒತ್ತನ್ನು ಇಟ್ಟಿದ್ದಾನೆ. (Will Ed Warren, Class Syllabus, *The Life of Christ: The Synoptic Gospels,* Harding University, 1991, 16).